

## ಗೊತ್ತಾಗಲಿಲ್ಲ

ಕಿಟ್ಟು, ಅಂಚೆ ಕಚೇರಿಗೆ ಹೋಗಿ, 'ಸಾರ್, ನನ್ನ ಹೆಂಡ್ತಿ ಕಾಣೆಯಾಗಿದ್ದಾಳೆ' ಎಂದು ಹೇಳಿದನು. 'ಇದು ಪೋಸ್ಟ್ ಆಫೀಸ್. ಪೊಲೀಸ್ ಸ್ಟೇಷನ್' ಅಲ್ಲ ಎಂದರು ಪೋಸ್ಟ್‌ಮಾಸ್ಟರ್.

'ಕ್ಷಮಿಸಿ ಸಾರ್. ಖುಷಿಯಿಂದಾಗಿ ಎಲ್ಲಿಗೆ ಹೋಬೇಕು ಎಂಬುದು ಗೊತ್ತಾಗಲಿಲ್ಲ' ಎನ್ನುತ್ತ ಕಿಟ್ಟು ಅಲ್ಲಿಂದ ಮತ್ತೆಲ್ಲಿಗೋ ನಡೆದ!

**ಶೋಭಾ ಪ್ರಮೋದ್,**
**ಮಹಾರಾಷ್ಟ್ರ**

## ಗುರಿ ತಾಕಿರಲಿಲ್ಲ!

ತಿಪ್ಪೇಶಿಯದು ವಿಷಮ ಸಂಸಾರ! ಅವನ ಹೆಂಡತಿ ಗಯ್ಯಾಳಿ, ಇವನು ಸಂಭಾವಿತ. ಸಣ್ಣ–ಪುಟ್ಟ ವಿಷಯಗಳನ್ನು ದೊಡ್ಡದು ಮಾಡಿ, ಜಗಳ ಮಾಡುತ್ತಿದ್ದಳು. ಬಡಿದಾಟಕ್ಕೂ ಮುಂದಾಗುತ್ತಿದ್ದಳು. ತಿಪ್ಪೇಶಿಯ ತಾಳ್ಮೆ ಒಡೆದು ಚೂರಾಯಿತು. ಕೊನೆಗೆ ದಾಂಪತ್ಯದಿಂದ ಬಿಡುಗಡೆ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ. ವಿಚಾರಣೆ ಆರಂಭವಾಯಿತು. ನ್ಯಾಯಾಧೀಶರು ತಿಪ್ಪೇಶಿಗೆ, 'ವಿಚ್ಛೇದನ ಕೇಳಿದ್ದೀರಲ್ಲಾ, ಯಾಕೆ!?' ಎಂದು ಕೇಳಿದರು.

ತಿಪ್ಪೇಶಿ ಹೀಗೆಂದ: 'ನನ್ನ ಹೆಂಡತಿ ಮುಂಗೋಪಿ, ಜಗಳಗಂಟಿ!. ಸಿಟ್ಟು ಹೆಚ್ಚಾದರೆ ನನ್ನ ಮೇಲೆ ಉರಿಯುವ ಕಟ್ಟಿಗೆ ಎಸೆಯುತ್ತಾಳೆ!' ಎಂದು ಹೇಳುತ್ತ ಅಂಗಿ ಕಳೆದು, ಮೈಮೇಲಿನ ಸುಟ್ಟ ಗಾಯಗಳನ್ನು ತೋರಿಸಿದ. ನ್ಯಾಯಾಧೀಶರು, 'ಹೌದಾ!? ಈ ಹಿಂಸೆ ಎಷ್ಟು ದಿನಗಳಿಂದ ನಡೀತಾ ಇದೆ?' ಎಂದು ಕೇಳಿದರು. ಆಗ ತಿಪ್ಪೇಶಿ, 'ಸರ್! ಒಂದು ವರ್ಷದಿಂದ ನಡೀತಿದೆ!' ಅಂದ. 'ಹಾಗಿದ್ದರೆ, ವಿಚ್ಛೇದನಕ್ಕೆ ಅರ್ಜಿ ಕೊಡಲು, ಇಷ್ಟೇಕೆ ತಡ?' ಎಂದು ಕೇಳಿದರು. 'ಸರ್! ಅವಳು ಎಸೆಯುತ್ತಿದ್ದ ಕಟ್ಟಿಗೆಗಳ ಗುರಿ, ಇದುವರೆಗೆ ತಾಕಿರಲಿಲ್ಲ!' ಎಂದು, ಕಣ್ಣೀರು ಒರೆಸಿಕೊಳ್ಳುತ್ತಾ ನುಡಿದ.

**ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**

